**ಸಾಕ್ಷಿಗೆ ದಿನಾಂಕ : *01-04-2025* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ವಾದಿಯರ ಪರ ಶ್ರೀ. ಪಿ. ಆರ್. ಎಸ್ ವಕೀಲರಿಂದ :**

ನಮ್ಮ ಮನೆತನದ ಮೂಲ ಪುರುಷ ರುದ್ರಪ್ಪ ಎಂದರೆ ಸರಿ. ಅವರ ಹೆಂಡತಿಯ ಹೆಸರು ನೀಲಮ್ಮ. ರುದ್ರಪ್ಪ ಮತ್ತು ನೀಲಮ್ಮ ರವರು ತೀರಿಕೊಂಡಿರುತ್ತಾರೆ. ರುದ್ರಪ್ಪರವರಿಗೆ ನಾಲ್ಕು ಜನ ಮಕ್ಕಳು. ಅವರೆಂದರೆ, ಶಂಕ್ರವ್ವ, ಚನ್ನಬಸಪ್ಪ, ಈರಪ್ಪ ಮತ್ತು ಚನ್ನಪ್ಪ. ಚನ್ನಬಸಪ್ಪ ರವರ ಹೆಂಡತಿಯ ಹೆಸರು ಬಸಮ್ಮ. ಚನ್ನಬಸಪ್ಪ ರವರಿಗೆ ಒಟ್ಟು 6 ಜನ ಮಕ್ಕಳಿದ್ದು. ಅವರೆಂದರೆ, ಶಾಂತಾ, ಶೋಭಾ, ಗೀತಾ, ಭಾರತಿ, ಈರಣ್ಣ ಮತ್ತು ಮಾಲಾ. ಈರಪ್ಪ ರವರು ತೀರಿಕೊಂಡಿರುತ್ತಾರೆ. ಅವರಿಗೆ ಮಕ್ಕಳು ಇರುವುದಿಲ್ಲ. ರುದ್ರಪ್ಪ ರವರ ಹೆಂಡತಿಯ ಹೆಸರು ಗಂಗವ್ವ. ಚನ್ನಪ್ಪ ರವರು ತೀರಿಕೊಂಡಿರುತ್ತಾರೆ. ಚೆನ್ನಪ್ಪ ರವರ ಹೆಂಡತಿಯ ಹೆಸರು ಬಂಡವ್ವ ಮತ್ತು ಅವರು ತೀರಿಕೊಂಡಿರುತ್ತಾರೆ. ಚೆನ್ನಪ್ಪರವರಿಗೆ 3 ಜನ ಮಕ್ಕಳಿದ್ದು, ಅವರೆಂದರೆ ನಾನು, ಬಸವರಾಜ ಮತ್ತು ಮುಕ್ತಾಬಾಯಿ. ರುದ್ರಪ್ಪರವರ ಮೊದಲನೆ ಮಗಳ ಹೆಸರು ಶಂಕ್ರವ್ವ ಮತ್ತು ಅವರನ್ನು ಬೀಳಗಿಗೆ ಮದುವೆ ಮಾಡಿಕೊಟ್ಟಿರುತ್ತಾರೆ. ಶಂಕ್ರವ್ವರವರು 2016 ರಲ್ಲಿ ತೀರಿಕೊಂಡಿರುತ್ತಾರೆ. ಶಂಕ್ರವ್ವ ರವರ ಗಂಡನ ಹೆಸರು ಯಮನಪ್ಪ ಮತ್ತು ಅವರು ತೀರಿಕೊಂಡಿರುತ್ತಾರೆ. ಶಂಕ್ರವ್ವ ರವರಿಗೆ ಸಂಗಪ್ಪ ಎನ್ನುವ ಮಗ ಇದ್ದು ಅವರು ತೀರಿಕೊಂಡಿರುತ್ತಾರೆ. ಸಂಗಪ್ಪ ರವರಿಗೆ ಪಡಿಯಪ್ಪ, ಶ್ರೀಶೈಲ್, ಯಮನಪ್ಪ ಮತ್ತು ಸುಭಾಷ್ ಎನ್ನುವ 4 ಜನ ಮಕ್ಕಳು ಇರುತ್ತಾರೆ. ರುದ್ರಪ್ಪ ರವರು ಸನ್ 1994 ರಲ್ಲಿ ತೀರಿಕೊಂಡಿರುತ್ತಾರೆ.

ಚನ್ನಬಸಪ್ಪ ರವರು ಹ್ಯಾಂಡ್ ಲೂಮ್ ಡೆವಲಪಮೆಂಟ್ ಕಾರ್ಪೋರೇಶನ್ ಇದರಲ್ಲಿ ಕೆಲಸ ಮಾಡುತ್ತಿದ್ದರು. ಚೆನ್ನಬಸಪ್ಪ ರವರು ಎಲ್ಲೆಲ್ಲಿ ಕೆಲಸ ಮಾಡುತ್ತಿದ್ದರೋ ಅಲ್ಲಲ್ಲಿ ತಮ್ಮ ಕುಟುಂಬವನ್ನು ಕರೆದುಕೊಂಡು ಹೋಗುತ್ತಿದ್ದರು.

ತುಳಸಿಗೇರಿ ಗ್ರಾಮದಲ್ಲಿರುವ ಸರ್ವೆ ನಂ.213/ಸಿ ಇದನ್ನು ರುದ್ರಪ್ಪ ರವರಿಗೆ ಸ್ವತಂತ್ರ್ಯ ಹೋರಾಟಗಾರರು ಎಂದು ಸರ್ಕಾರವು ಕೊಟ್ಟಿತ್ತು. ಸದರಿ ಜಮೀನು ರುದ್ರಪ್ಪ ರವರ ಹೆಸರಿನಲ್ಲಿ ಇತ್ತು. ಅವರ ಮರಣಾ ನಂತರ ಅವರ ಹೆಸರಿನಲ್ಲಿ ಉತಾರೆ ಇತ್ತು ಎಂದರೆ ಸಾಕ್ಷಿದಾರರು ಅವರ ಮರಣಾ ನಂತರ ಈರಪ್ಪ ರವರ ಹೆಸರು ದಾಖಲೆಯಲ್ಲಿ ಬಂದಿರುತ್ತದೆ ಎಂದು ಹೇಳುತ್ತಾರೆ. ರುದ್ರಪ್ಪ ರವರ ಮರಣಾ ನಂತರ ನೀಲಮ್ಮ ಮತ್ತು ಚನ್ನಪ್ಪ ರವರು ಈರಪ್ಪ ರವರಿಗೆ ಎಮ್.ಇ ನಂ.408 ರ ಪ್ರಕಾರ ತಮ್ಮ ಹಕ್ಕು ಬಿಟ್ಟುಕೊಟ್ಟಿರುತ್ತಾರೆ ಎಂದು ಹೇಳುವುದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಈರಪ್ಪ ರವರ ಹೆಸರಿಗೆ ಹಕ್ಕು ಬಿಟ್ಟುಕೊಟ್ಟಿರುವುದು ಚನ್ನಬಸಪ್ಪ ರವರ ವಾರಸುದಾರರಿಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ: 20-11-1997 ರಂದು ಈರಪ್ಪ ರವರಿಗೆ ಸರ್ವೆ ನಂ.213/ಸಿ ಇದನ್ನು ಮಾರಾಟ ಮಾಡಲು ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಈರಪ್ಪ ರವರು ಮಾರಾಟ ಮಾಡಿದ ವ್ಯವಹಾರವು ವಾದಿಯರಿಗೆ ಬಂಧನಕಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.213/ಸಿ ಇದು ಪಿತ್ರಾರ್ಜಿತ ಆಸ್ತಿಯಾಗಿದ್ದು, ಅದರಲ್ಲಿ ವಾದಿಯರಿಗೆ ಹಿಸ್ಸಾ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಸದರಿ ಆಸ್ತಿಯನ್ನು ಮಾರಾಟ ಮಾಡಿ 2 ನೇ ಪ್ರತಿವಾದಿಗೆ ಜಾಗ ಹಿಡಿದು ಮನೆ ಕಟ್ಟಿಸಿಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ.

ಮೂಲತಃ ಸರ್ವೆ ನಂ.317 ಇದು 6 ಎಕರೆ 16 ಗುಂಟೆ ಇತ್ತು. ಇದು ಮೂಲತಃ ರುದ್ರಪ್ಪ ರವರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿದಾರರು ಚನ್ನಪ್ಪ ಮತ್ತು ಈರಪ್ಪ ರವರು ಕೂಡಿ ರುದ್ರಪ್ಪ ರವರ ಹೆಸರಿನಲ್ಲಿ ಸನ್ 1963 ರಲ್ಲಿ ಖರೀದಿ ಮಾಡಿದ್ದರು ಎಂದು ಹೇಳುತ್ತಾರೆ. ಸರ್ವೆ ನಂ.317 ಇದು ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ.

ಆಸ್ತಿ ನಂ.479, 14, 11 ಎ ಮತ್ತು 11 ಇವುಗಳನ್ನು ಎಮ್.ಇ.ನಂ.1928 ರ ಪ್ರಕಾರ ವಾದಿಯರಿಗೆ ತಿಳಿಸಿದೇ ಪಾಲು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಡ.ನಂ.1928 ರಲ್ಲಿ ನಮೂದಿಸಿದ ಎಲ್ಲಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಆಗಿರುತ್ತವೆ ಎಂದರೆ ಸರಿಯಲ್ಲ. ಡ.ನಂ.1928 ಇದು ವಾದಿಯರ ಹಿಸ್ಸಾದ ಮೇಲೆ ಬಂಧನಕಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಡ.ನಂ.1928 ರ ಮೇಲೆ ರಚನೆಯಾದ ಡ.ನಂ.60 ಇದು ಸುಳ್ಳಾಗಿ ರಚನೆಯಾಗಿರುತ್ತದೆ ಎಂದರೆ ಸರಿಯಲ್ಲ. ಈರಪ್ಪ ಮತ್ತು ಚನ್ನಪ್ಪ ರವರು ದಿನಾಂಕ: 06-06-2008 ರಂದು ವಾದಿಯರಿಗೆ ಪಾಲು ಕೊಡಬಾರದು ಎಂದು ಎಮ್.ಆರ್.ನಂ.57 ನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ.317 ಇದನ್ನು ಬೇಕಾಯ್ದೇಶೀರ್ 2 ಭಾಗಗಳನ್ನಾಗಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅದು ವಾದಿಯರ ಪಾಲಿನ ಬಂಧನಕಾರಿಯಾಗುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಮಾನ್ಯ ವಕೀಲರ ವಿನಂತಿ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

HANAMANTARAO R KULKARNI

Digitally signed by HANAMANTARAO R KULKARNI
Date: 2025.04.02 10:55:39 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.